## ೧೮.೦೩.೨೦೧೭ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೨೦ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್‌ನ ೨೦ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ ೧೮, ೨೦೧೭ರ ಶನಿವಾರ ಬೆಳಿಗ್ಗೆ ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | ಪ್ರೊ. ಪದ್ಮಾಶೇಖರ್, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | ಶ್ರೀ ಬಿ.ಎಸ್. ಹೊಸೂರ, ಸವದತ್ತಿ | ಸದಸ್ಯರು |
| ೩. | ಡಾ. ಎಂ.ಎ. ಶೃತಿಕೀರ್ತಿ, ಮತ್ತೂರು | ಸದಸ್ಯರು |
| ೪. | ಶ್ರೀ ಡಿ.ಪಿ. ಅನಂತ, ಬೆಂಗಳೂರು | ಸದಸ್ಯರು |
| ೫. | ರಾಜಗುರು ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕವಲೇದುರ್ಗ | ಸದಸ್ಯರು |
| ೬. | ಡಾ. ಎಸ್. ವೇಣುಗೋಪಾಲ್, ಮೈಸೂರು | ಸದಸ್ಯರು |
| ೭. | ಡಾ. ಸಿ. ನಂಜುಂಡಯ್ಯ, ಪ್ರಾಚಾರ್ಯರು, ಆದಿಚುಂಚನಗಿರಿ | ಸದಸ್ಯರು |
| ೮. | ವಿದ್ವಾನ್ ಜೆ.ಸಿ. ರಾಜಶೇಖರಯ್ಯ, ಪ್ರಾಚಾರ್ಯರು, ತುಮಕೂರು | ಸದಸ್ಯರು |
| ೯. | ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ | ಸದಸ್ಯರು |
| ೧೦. | ಡಾ. ವಿ. ಗಿರೀಶ್‌ಚಂದ್ರ, ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | ಶ್ರೀ ಯೋಗೀಶಬಾಬು, ಬಿ.ಜಿ. ಕೆರೆ, ಮೊಳಕಾಲ್ಮೂರು ತಾ. | ಸದಸ್ಯರು |
| ೧೨. | ಶ್ರೀಮತಿ ಎಂ. ಶಿಲ್ಪಾ, ಕ.ಆ.ಸೇ, ಕುಲಸಚಿವರು. | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಚಿತ್ರದುರ್ಗ | ಸದಸ್ಯರು |
| ೭. | ಡಾ. ಎಸ್.ಕೆ. ರಾಮಶೇಷನ್, ಮೈಸೂರು | ಸದಸ್ಯರು |
| ೮. | ಡಾ. ಎಚ್. ಸತ್ಯನಾರಾಯಣ ರಾವ್, ಪ್ರಾಚಾರ್ಯರು, ಬೆಂಗಳೂರು | ಸದಸ್ಯರು |
| ೯. | ಪ್ರೊ. ಶ್ರೀನಿವಾಸ ವರಖೇಡಿ, ಡೀನ್, ಶಾಸ್ತ್ರನಿಕಾಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳನ್ನು ವಿಭಾಗಗಳಿಗೆ ಸ್ಥಿರೀಕರಣಗೊಳಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010; ದಿನಾಂಕ: 25.01.2011ರಲ್ಲಿ ಯುಜಿಸಿ ವೇತನಶ್ರೇಣಿಯ 45 ಬೋಧಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಮಂಜೂರಾತಿ ನೀಡಿತ್ತು. ಆ ಮೇರೆಗೆ ವಿಶ್ವವಿದ್ಯಾಲಯವು ಅಧಿಸೂಚನೆ (ಸಂಖ್ಯೆ: KSU: UGC-PS.1/Prof./2012-13; Dated | |

| | | |
|---|---|---|
| | ನೇಮಕ ಮಾಡಿಕೊಂಡಿತು ಹಾಗೂ 01.01.2013) ಹೊರಡಿಸಿ, ಪ್ರಾಧ್ಯಾಪಕ-02 ಹುದ್ದೆಗಳನ್ನು ನೇಮಕ ಮಾಡಿಕೊಂಡಿತು ಹಾಗೂ ಅಧಿಸೂಚನೆ (ಸಂಖ್ಯೆ: KSU: UGC-PS/Teaching-Non Teaching Apmnt./2013-14; Dated 30.05.2013 ಮತ್ತು KSU: UGC-PS/Teaching-Non Teaching Apmnt./ 2014-15; Dated 05.11.2014)ಗಳನ್ನು ಹೊರಡಿಸಿ ಸಹ ಪ್ರಾಧ್ಯಾಪಕ ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಭಾಷಾ ನಿಕಾಯ, ಶಾಸ್ತ್ರ ನಿಕಾಯ ಮತ್ತು ವೇದಾಂತ ನಿಕಾಯಗಳಿಗೆ ನೇಮಕ ಮಾಡಿಕೊಳ್ಳಲಾಯಿತು. ಒಟ್ಟು 17 ಜನ ಪ್ರಾಧ್ಯಾಪಕ, ಸಹಪ್ರಾಧ್ಯಾಪಕ ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಈವರೆಗೂ ನೇಮಕ ಮಾಡಿಕೊಳ್ಳಲಾಗಿದೆ.<br>ಸದರಿ 17 ಜನ ಬೋಧಕ ಸಿಬ್ಬಂದಿಗಳನ್ನು ಆಯಾ ನಿಕಾಯಗಳ ಅಡಿಯಲ್ಲಿ ವಿಭಾಗವಾರು [ಭಾಷಾನಿಕಾಯ: ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ, ಹಸ್ತಪ್ರತಿಶಾಸ್ತ್ರ ವಿಭಾಗ; ಶಾಸ್ತ್ರನಿಕಾಯ: ನ್ಯಾಯ ಮತ್ತು ವೈಶೇಷಿಕ ವಿಭಾಗ, ಅಲಂಕಾರಶಾಸ್ತ್ರ ವಿಭಾಗ; ವೇದಾಂತ ನಿಕಾಯ: ವೇದಾಂತ ವಿಭಾಗ] ಸ್ಥಿರೀಕರಣಗೊಳಿಸಬೇಕಾಗಿದೆ. ಅವರು ಪಡೆದ ವಿದ್ಯಾರ್ಹತೆ, ಶೈಕ್ಷಣಿಕ ಅನುಭವ ಮತ್ತು ಸಂಶೋಧನೆ –ಇವುಗಳನ್ನು ಪರಿಶೀಲಿಸಲಾಗಿದೆ ಹಾಗೂ ಪಟ್ಟಿಯಲ್ಲಿರುವಂತೆ, ವಿಭಾಗವಾರು ತಾತ್ಕಾಲಿಕವಾಗಿ ಸ್ಥಿರೀಕರಿಸಬಹುದಾಗಿದೆ. ಮುಂದೆ ಹೆಚ್ಚಿನ ವಿಭಾಗಗಳನ್ನು ತೆರೆದಾಗ, ವಿಶೇಷ ಅಧ್ಯಯನವನ್ನು ಪರಿಗಣಿಸಿ ಮರುಸ್ಥಿರೀಕರಣಕ್ಕೆ ಅವಕಾಶ ಕಲ್ಪಿಸಬಹುದಾಗಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. | ಪ್ರಶಿಕ್ಷಣ ಪರಿಷತ್ತು ಒಪ್ಪಿಗೆ ಸೂಚಿಸಿತು. |
| ವಿಷಯ 02 | **'ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ' ಅನುಮೋದನೆ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆ ಆದಾಗ ಅನುದಾನಸಹಿತ ಮತ್ತು ಅನುದಾನರಹಿತ ಸಂಸ್ಕೃತ ಪಾಠಶಾಲೆಗಳನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಗಿತ್ತು, ಆದರೆ ಪರಿನಿಯಮವನ್ನು ರೂಪಿಸಿರಲಿಲ್ಲ. ಆ ಬಗ್ಗೆ ವಿಶ್ವವಿದ್ಯಾಲಯವು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಪರಿನಿಯಮ ರೂಪಿಸಿಕೊಡುವಂತೆ ಕೋರಿತ್ತು. ಸಮಿತಿ ರೂಪಿಸಿದ ಪರಿನಿಯಮವನ್ನು ಮತ್ತೊಮ್ಮೆ ಪರಿಶೀಲಿಸಿ, ಪ್ರಶಿಕ್ಷಣ ಪರಿಷತ್ತಿನ ಒಪ್ಪಿಗೆಗೆ ಮಂಡಿಸಿದೆ. | ಬದಲಾವಣೆ ಇದ್ದರೆ ದಿ:24.03.2017ರ ಒಳಗೆ ಸೂಚಿಸುವುದು ಇಲ್ಲದಿದ್ದಲ್ಲಿ ಯಥಾವತ್ತಾಗಿ ಅಂಗೀಕರಿಸುವುದಕ್ಕೆ ಒಪ್ಪಿಗೆ ಸೂಚಿಸಿತು. |
| ವಿಷಯ 03 | **ಅನುದಾನಿತ-ಅನುದಾನರಹಿತ ಸಂಸ್ಕೃತ ಕಾಲೇಜುಗಳ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ನಿಯಮಾವಳಿಯ ಬಗೆಗೆ.**<br>ದಿನಾಂಕ 08.09.2015ರಂದು ನಡೆದ ಪ್ರಶಾಸನ ಸಮಿತಿಯ 28ನೇ ಸಭೆಯಲ್ಲಿ ಅನುದಾನಿತ-ಅನುದಾನ ರಹಿತ ಸಂಸ್ಕೃತ ಕಾಲೇಜುಗಳ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ನಿಯಮಾವಳಿಯನ್ನು ರಚಿಸಲು ನಿರ್ಣಯ ಕೈಗೊಂಡು ಪ್ರೊ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು ಮತ್ತು ಡೀನ್, ಕ.ಸಂ.ವಿ., ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ: 11.03.2016ರಂದು ಸಭೆ ಸೇರಿ, ಇತರೆ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ನು ಪರಿಶೀಲಿಸಿ, ಈ ನಿಯಮಾವಳಿಯ ಕರಡು ಪ್ರತಿಯನ್ನು ರೂಪಿಸಿದೆ. ಈ ನಿಯಮಾವಳಿಯನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಅನುಮೋದನೆಗಾಗಿ ಪ್ರಶಿಕ್ಷಣ ಪರಿಷತ್ ಸಭೆಗೆ ಮಂಡಿಸಿದೆ. | ಬದಲಾವಣೆ ಇದ್ದರೆ ದಿ:24.03.2017ರ ಒಳಗೆ ಸೂಚಿಸುವುದು ಇಲ್ಲದಿದ್ದಲ್ಲಿ ಯಥಾವತ್ತಾಗಿ ಅಂಗೀಕರಿಸುವುದಕ್ಕೆ ಒಪ್ಪಿಗೆ ಸೂಚಿಸಿತು. |
| ವಿಷಯ 04 | **"ಫ್ರೆಂಚ್ ಇನ್‌ಸ್ಟಿಟ್ಯೂಟ್ ಆಫ್ ಪಾಂಡಿಚೇರಿ" ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಶೋಧನಪ್ರಧಾನವಾದ ವಿಶ್ವವಿದ್ಯಾಲಯವಾದ ಕಾರಣ, ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಪಾಂಡಿಚೇರಿಯ "ಫ್ರೆಂಚ್ ಇನ್‌ಸ್ಟಿಟ್ಯೂಟ್ ಆಫ್ ಪಾಂಡಿಚೇರಿ" ಸಂಸ್ಥೆಯ ಸಹಯೋಗದೊಂದಿಗೆ ಅಧ್ಯಯನ ಮತ್ತು ಯೋಜನೆಯನ್ನು ವಿಶ್ವವಿದ್ಯಾಲಯವು ಕೈಗೊಂಡಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಿದೆ. ಈ ಸಂಬಂಧ ಮುಂದಿನ ಕ್ರಮಗಳನ್ನು ವಹಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. | ಸಭೆ ಸರ್ವಾನುಮತದಿಂದ ಒಪ್ಪಿತು. |

| | | |
|---|---|---|
| ವಿಷಯ 05 | "ಗೌರ ಬಂಗ ವಿಶ್ವವಿದ್ಯಾಲಯ"ದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಶೋಧನಪ್ರಧಾನವಾದ ವಿಶ್ವವಿದ್ಯಾಲಯವಾದ ಕಾರಣ, ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಪಶ್ಚಿಮ ಬಂಗಾಳದ ಗೌರ ಬಂಗ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಅಧ್ಯಯನ ಸಂಶೋದನೆ ಪರಸ್ಪರ ವಿನಿಮಯ ಹಾಗೂ ವಿಚಾರಗೋಷ್ಠಿಗಳ ಆಯೋಜನೆಯನ್ನು ವಿಶ್ವವಿದ್ಯಾಲಯವು ಕೈಗೊಂಡಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಸದರಿ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಿದೆ. ಈ ಸಂಬಂಧ ಮುಂದಿನ ಕ್ರಮಗಳನ್ನು ವಹಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. | ಸಭೆ ಸರ್ವಾನುಮತದಿಂದ ಒಪ್ಪಿತು. |
| ವಿಷಯ 06 | "ಮಣಿಪಾಲ್ ವಿಶ್ವವಿದ್ಯಾಲಯ"ದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಶೋಧನಪ್ರಧಾನವಾದ ವಿಶ್ವವಿದ್ಯಾಲಯವಾದ ಕಾರಣ, ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಮಣಿಪಾಲ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಅಧ್ಯಯನ ಸಂಶೋದನೆ ಪರಸ್ಪರ ವಿನಿಮಯ ಹಾಗೂ ವಿಚಾರಗೋಷ್ಠಿಗಳ ಆಯೋಜನೆಯನ್ನು ವಿಶ್ವವಿದ್ಯಾಲಯವು ಕೈಗೊಂಡಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಸದರಿ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಿದೆ. ಈ ಸಂಬಂಧ ಮುಂದಿನ ಕ್ರಮಗಳನ್ನು ವಹಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. | ಸಭೆ ಸರ್ವಾನುಮತದಿಂದ ಒಪ್ಪಿತು. |
| ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | | |
| ವಿಷಯ 01 | ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಬಗೆಗೆ.<br>ಮುಖ್ಯ ಕಾರ್ಯಸೂಚಿಯ ವಿಷಯ ಸಂಖ್ಯೆ 01ಕ್ಕೆ ಸಂಬಂಧಿಸಿದಂತೆ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ)ದ '12ಬಿ' ಮಾನ್ಯತೆ ಪಡೆದುಕೊಳ್ಳುವುದಕ್ಕಾಗಿ, ದಿನಾಂಕ: 16.03.2016ರಂದು ನಡೆದ ಪ್ರಶಾಸನ ಸಮಿತಿ 32ನೇ ಸಭೆಯು, ಎರಡು ಹೊಸ ವಿಭಾಗಗಳನ್ನು ತೆರೆಯಲು ನಿರ್ಣಯಿಸಿದ್ದು(ಭಾಷಾನಿಕಾಯದ ಅಡಿಯಲ್ಲಿ 'ಹಸ್ತಪ್ರತಿಶಾಸ್ತ್ರ' ಹಾಗೂ ಶಾಸ್ತ್ರನಿಕಾಯದ ಅಡಿಯಲ್ಲಿ 'ಅಲಂಕಾರಶಾಸ್ತ್ರ') ಪ್ರಶಿಕ್ಷಣ ಪರಿಷತ್ತಿನ ಅವಗಾಹನೆಗಾಗಿ ಮಂಡಿಸಿದೆ. | ಸಭೆ ಸರ್ವಾನುಮತದಿಂದ ಒಪ್ಪಿತು. |
| ವಿಷಯ 02 | ಯುಜಿಸಿ ವೇತನಶ್ರೇಣಿಯ ಬೋಧಕ ಸಿಬ್ಬಂದಿಗಳ 'Career Advancement Scheme' (CAS) ಅಳವಡಿಸುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2013–14ನೇ ಸಾಲಿನಿಂದ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸುತ್ತಿದೆ. ವಿಶ್ವವಿದ್ಯಾಲಯಕ್ಕೆ ನೇಮಕಗೊಳ್ಳುವ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ನಿಯಮಾನುಸಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್ (CAS)ಅನ್ನು ಅಳವಡಿಸಿಕೊಂಡು, ಚಾಲ್ತಿಗೆ ತರುವುದಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. | ಸಭೆ ಸರ್ವಾನುಮತದಿಂದ ಒಪ್ಪಿತು. |
| ವಿಷಯ 03 | 'ಸಂಸ್ಕೃತ ಸಾಹಿತ್ಯ' / 'ವೇದ ಮೂಲ' ಪ್ರಸಿದ್ಧ ಪರೀಕ್ಷೆಯನ್ನು ಖಾಸಗಿಯಾಗಿ ಬರೆಯುವ ಬಗೆಗೆ.<br>ಸಂಸ್ಕೃತ ಕಾವ್ಯ/ ವೇದ ಪ್ರವೇಶ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಅಥವಾ ದ್ವಿತೀಯ ಪಿಯುಸಿ ಉತ್ತೀರ್ಣರಾದ ಅಭ್ಯರ್ಥಿಗಳು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸುವ ಸಂಸ್ಕೃತ ಸಾಹಿತ್ಯ/ ವೇದ ಮೂಲ ಪ್ರಸಿದ್ಧ ಪರೀಕ್ಷೆಗಳನ್ನು ಖಾಸಗಿಯಾಗಿ ಬರೆಯಲು ಅವಕಾಶ ನೀಡಲಾಗಿದೆ. ಅನುದಾನಿತ ಸಂಸ್ಕೃತ ಪಾಠಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಸಂಸ್ಕೃತ ಸಾಹಿತ್ಯ/ ವೇದ ಮೂಲ ವಿದ್ಯಾರ್ಹತೆಯನ್ನು ನಿಗದಿಪಡಿಸಿದ್ದು, ಖಾಸಗಿಯಾಗಿ ಓದಿದವರೇ ಹೆಚ್ಚು ಆಯ್ಕೆಗೊಳ್ಳುತ್ತಿದ್ದಾರೆ. ಅವರಿಗೆ ಸಂಸ್ಕೃತದ ಮೂಲಜ್ಞಾನ ಇರುವುದು ಕಡಿಮೆ ಎಂಬುದು ಅವಲೋಕನದಿಂದ ಗಮನಕ್ಕೆ ಬಂದಿದೆ. ಉತ್ತಮ ಗುಣಮಟ್ಟದ ಸಂಸ್ಕೃತ ಶಿಕ್ಷಣವನ್ನು ನೀಡಲು ಬೋಧನಾ ಕೌಶಲ್ಯದ ಜೊತೆಗೆ ಉತ್ತಮ ಸಂಸ್ಕೃತಜ್ಞಾನ ಅಗತ್ಯದ ಹಿನ್ನೆಲೆಯಲ್ಲಿ, ಇನ್ನು ಮುಂದೆ ಸಂಸ್ಕೃತ ಸಾಹಿತ್ಯ/ ವೇದ ಮೂಲ ಪ್ರಸಿದ್ಧ ಪರೀಕ್ಷೆಯನ್ನು ಖಾಸಗಿಯಾಗಿ ಬರೆಯುವುದಕ್ಕೆ ನೀಡಿರುವ ಅವಕಾಶವನ್ನು | ನಿರ್ಣಯ ಪ್ರಶಿಕ್ಷಣ ಸಮಿತಿ ದೀರ್ಘವಾಗಿ ಚರ್ಚಿಸಿತು ಅಂತಿಮವಾಗಿ ಸಂಸ್ಕೃತ ಭಾಷೆಯ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾದರೆ ಖಾಸಗಿ ಪರೀಕ್ಷೆ ಕಟ್ಟುವವರಿಗೆ Private ಎಂದು ಮುದ್ರೆ |

| | | |
|---|---|---|
| | (CAS)ಅನ್ನು ಅಳವಡಿಸಿಕೊಂಡು, ಜಾರಿಗೆ ತರುವುದಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. | |
| ವಿಷಯ 03 | **'ಸಂಸ್ಕೃತ ಸಾಹಿತ್ಯ' / 'ವೇದ ಮೂಲ' ಪ್ರಸಿದ್ಧ ಪರೀಕ್ಷೆಯನ್ನು ಖಾಸಗಿಯಾಗಿ ಬರೆಯುವ ಬಗೆಗೆ.** ಸಂಸ್ಕೃತ ಕಾವ್ಯ/ ವೇದ ಪ್ರವೇಶ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಅಥವಾ ದ್ವಿತೀಯ ಪಿಯುಸಿ ಉತ್ತೀರ್ಣರಾದ ಅಭ್ಯರ್ಥಿಗಳು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸುವ ಸಂಸ್ಕೃತ ಸಾಹಿತ್ಯ/ ವೇದ ಮೂಲ ಪ್ರಸಿದ್ಧ ಪರೀಕ್ಷೆಗಳನ್ನು ಖಾಸಗಿಯಾಗಿ ಬರೆಯಲು ಅವಕಾಶ ನೀಡಲಾಗಿದೆ. ಅನುದಾನಿತ ಸಂಸ್ಕೃತ ಪಾಠಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಸಂಸ್ಕೃತ ಸಾಹಿತ್ಯ/ ವೇದ ಮೂಲ ವಿದ್ಯಾರ್ಹತೆಯನ್ನು ನಿಗದಿಪಡಿಸಿದ್ದು, ಖಾಸಗಿಯಾಗಿ ಓದಿದವರೇ ಹೆಚ್ಚು ಆಯ್ಕೆಗೊಳ್ಳುತ್ತಿದ್ದಾರೆ. ಅವರಿಗೆ ಸಂಸ್ಕೃತದ ಮೂಲಜ್ಞಾನ ಇರುವುದು ಕಡಿಮೆ ಎಂಬುದು ಅವಲೋಕನದಿಂದ ಗಮನಕ್ಕೆ ಬಂದಿದೆ. ಉತ್ತಮ ಗುಣಮಟ್ಟದ ಸಂಸ್ಕೃತ ಶಿಕ್ಷಣವನ್ನು ನೀಡಲು ಬೋಧನಾ ಕೌಶಲ್ಯದ ಜೊತೆಗೆ ಉತ್ತಮ ಸಂಸ್ಕೃತಜ್ಞಾನ ಅಗತ್ಯದ ಹಿನ್ನೆಲೆಯಲ್ಲಿ, ಇನ್ನು ಮುಂದೆ ಸಂಸ್ಕೃತ ಸಾಹಿತ್ಯ/ ವೇದ ಮೂಲ ಪ್ರಸಿದ್ಧ ಪರೀಕ್ಷೆಯನ್ನು ಖಾಸಗಿಯಾಗಿ ಬರೆಯುವುದಕ್ಕೆ ನೀಡಿರುವ ಅವಕಾಶವನ್ನು ರದ್ದುಪಡಿಸಬಹುದಾಗಿದೆ. ಈ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಪ್ರಶಿಕ್ಷಣ ಪರಿಷತ್ ಸಭೆಗೆ ಮಂಡಿಸಿದೆ. | ನಿರ್ಣಯ ಪ್ರಶಿಕ್ಷಣ ಸಮಿತಿ ದೀರ್ಘವಾಗಿ ಚರ್ಚಿಸಿತು ಅಂತಿಮವಾಗಿ ಸಂಸ್ಕೃತ ಭಾಷೆಯ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾದರೆ ಖಾಸಗಿ ಪರೀಕ್ಷೆ ಕಟ್ಟುವವರಿಗೆ Private ಎಂದು ಮುದ್ರೆ ಹಾಕಬೇಕೆಂದು ಸಭೆ ಸೂಚಿಸಿತು. |
| ವಿಷಯ 04 | **'ಪ್ರಥಮಾ' ಪ್ರಸಿದ್ಧ ಪರೀಕ್ಷೆಯನ್ನು ವಲಯವಾರು ನಡೆಸುವ ಬಗೆಗೆ.** ಪ್ರಥಮಾ, ಕಾವ್ಯ, ಸಾಹಿತ್ಯ ಪರೀಕ್ಷೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಮಾನಾಂತರವಾಗಿ (ಪ್ರಥಮಾ–8ನೇ ತರಗತಿ, ಕಾವ್ಯ–10ನೇ ತರಗತಿ ಹಾಗೂ ಸಾಹಿತ್ಯ–12ನೇ ತರಗತಿ) ಪರಿಗಣಿಸಬೇಕೆಂದು ಬಹಳ ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆ. ಇದಕ್ಕಾಗಿಯೇ ಕಾವ್ಯ ಹಾಗೂ ಸಾಹಿತ್ಯ ತರಗತಿಗಳಲ್ಲಿ ಭಾಷಾಪತ್ರಿಕೆಯನ್ನು ಸೇರಿಸಲಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 8ನೇ ತರಗತಿಗೆ ಪ್ರಸಿದ್ಧ ಪರೀಕ್ಷೆ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ 8ನೇ ತರಗತಿಗೆ ಸಮಾನವಾಗಿ ಪರಿಗಣಿಸಿರುವ ಪ್ರಥಮಾ ಪ್ರಸಿದ್ಧ ಪರೀಕ್ಷೆಯನ್ನು ವಲಯವಾರು ನಡೆಸಿ ಮತ್ತು ಅದರ ಜವಾಬ್ದಾರಿಯನ್ನು ವಿಷಯ ಪರಿವೀಕ್ಷಕರಿಗೆ ವಹಿಸುವುದು ಸೂಕ್ತ. ಆದ್ದರಿಂದ ಸದರಿ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಸೂಕ್ತ ಆದೇಶಕ್ಕಾಗಿ ಮಂಡಿಸಿದೆ. | ಸಭೆ ಸರ್ವಾನುಮತದಿಂದ ಒಪ್ಪಿತು. |
| ವಿಷಯ 05 | **ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಅಧ್ಯಾಪಕರ ನೇಮಕಾತಿ ಬಗೆಗೆ.** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ 09 ಅನುದಾನಿತ ಸಂಸ್ಕೃತ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕಾಲಕಾಲಕ್ಕೆ ವಯೋನಿವೃತ್ತಿ/ನಿಧನ/ಮುಂಬಡ್ತಿ ಮುಂತಾದ ಕಾರಣಗಳಿಂದ ತೆರವಾಗುವ ಅಧ್ಯಾಪಕರ ನೇಮಕಾತಿಗೆ ವಿಶ್ವವಿದ್ಯಾಲಯವು ನಿಯಮಾನುಸಾರ ಇಲಾಖಾ ಪ್ರತಿನಿಧಿಯನ್ನು ನಿಯೋಜಿಸುತ್ತದೆ. ವಿಶ್ವವಿದ್ಯಾಲಯವು ನಿಯೋಜಿಸುವ ಇಲಾಖಾ ಪ್ರತಿನಿಧಿಯ ಒಪ್ಪಿಗೆ ಇಲ್ಲದೆ ಆಡಳಿತ ಮಂಡಳಿಯು ನೇಮಕಾತಿ ನಿರ್ಣಯ ಕೈಗೊಳ್ಳುವಂತಿಲ್ಲ. ಅಧ್ಯಾಪಕರ ನೇಮಕಾತಿಗಾಗಿ ಲಿಖಿತ ಪರೀಕ್ಷೆ ನಡೆಸುವ ಮತ್ತು ಮೌಲ್ಯಮಾಪನ ಮಾಡುವ ಜವಾಬ್ದಾರಿ ಇಲಾಖಾ ಪ್ರತಿನಿಧಿಯದ್ದೇ ಆಗಿರುತ್ತದೆ. ಸಂಬಂಧಪಟ್ಟ ವಿಷಯತಜ್ಞರಿಂದ ವಿಶ್ವವಿದ್ಯಾಲಯವೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುತ್ತದೆ. ಆಡಳಿತ ಮಂಡಳಿಗೆ ಈ ಅವಕಾಶ ಇರುವುದಿಲ್ಲ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. | ಈ ಬಗೆಗೆ ಒಂದು ಮಾರ್ಗದರ್ಶಕ ಸೂಚಿ ಮಾಡಿ ಮತ್ತೆ ಪ್ರಶಿಕ್ಷಣ ಸಮಿತಿಯ ಅನುಮೋದನೆಗೆ ಮಂಡಿಸುವಂತೆ ಸಭೆ ನಿರ್ಣಯಿಸಿತು. |
| ವಿಷಯ 06 | **ವೇದವಿಜ್ಞಾನ ಶೋಧಸಂಸ್ಥಾನ ಸಂಸ್ಕೃತ ಕಾಲೇಜಿಗೆ ಮಾನ್ಯತೆ ಮತ್ತು ಅನುಮತಿಯನ್ನು ನೀಡುವ ಬಗೆಗೆ.** ನಿರ್ಣಯ; ವಿ.ವಿ. ನಿಯಮಾನುಸಾರ ಅನುದಾನರಹಿತ ಶಾಲಾ, ಕಾಲೇಜುಗಳಿಗೆ ಮೂರು ವರ್ಷಕ್ಕೆ ಮಾನ್ಯತೆ ಕೊಡುವ ನಿಯಮವಾಗಿ ವೇದವಿಜ್ಞಾನ ಶೋಧಸಂಸ್ಥಾನ ಇಲ್ಲಿಗೂ ಅಳವಡಿಸುವುದು ಯುಜಿಸಿ ನಿಯಮಾನುಸಾರ ಅರ್ಹ ಅಧ್ಯಾಪಕರು ಇದ್ದಾರೆ ಪ್ರಥಮ ಬಿ.ಎ(ಶಾಸ್ತ್ರೀ) ಮತ್ತು ಎಂ.ಎ(ಆಚಾರ್ಯ) ನಡೆಸುವುದಕ್ಕೆ ಅನುಮತಿಸಿತು. | ಸಭೆ ಸರ್ವಾನುಮತದಿಂದ ಒಪ್ಪಿತು. |

ಕುಲಸಚಿವರು

ಕುಲಪತಿಗಳು 20.3.17